# ತುಮಕೂರು ವಿಶ್ವವಿದ್ಯಾನಿಲಯ

## ಡಾ.ಬಿ.ಆರ್.ಅಂಬೇಡ್ಕರ್ ಅಧ್ಯಯನ ಕೇಂದ್ರ

ಚಿವುಕುಲ ಕಟ್ಟಡ, ವಿಶ್ವವಿದ್ಯಾನಿಲಯ ಆವರಣ, ಬಿ.ಹೆಚ್.ರಸ್ತೆ ತುಮಕೂರು – 572 103

ಸಂಖ್ಯೆ: ತು.ವಿ:ಡಾ.ಬಿ.ಆರ್.ಅಂ.ಅ.ಕೇಂ:2025-26: 75 ದಿನಾಂಕ: 02.03.2026

ಪ್ರೊ. ಕೇಶವ
ನಿರ್ದೇಶಕರು

### ದರಪಟ್ಟಿ ಆಹ್ವಾನ (ವಿ.ವಿ.ವೆಬ್ ಸೈಟ್‌ನಲ್ಲಿ)

ವಿಷಯ: ದಿನಾಂಕ: 11.03.2026 ರಂದು "ಬಾಬಾ ಸಾಹೇಬ್ ಡಾ.ಬಿ.ಆರ್. ಅಂಬೇಡ್ಕರ್ ವಿಚಾರಗಳು ಮತ್ತು ಭಾರತದ ಸಂವಿಧಾನ" ಕಾರ್ಯಕ್ರಮಕ್ಕೆ "ಉಪನ್ಯಾಸಕರಿಗೆ ಊಟ ಮತ್ತು ವಿದ್ಯಾರ್ಥಿಗಳಿಗೆ ಲಘು ಉಪಹಾರ" ಸರಬರಾಜಿಗಾಗಿ ದರಪಟ್ಟಿ ಆಹ್ವಾನಿಸುತ್ತಿರುವ ಕುರಿತು.

ಉಲ್ಲೇಖ: ವಿ.ವಿ ಆದೇಶ ಸಂಖ್ಯೆ:ತುವಿ:ಸಾ.ವಿ:2025-26/3636 ದಿನಾಂಕ: 26.02.2026

* * * *

ಈ ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ಡಾ.ಬಿ.ಆರ್.ಅಂಬೇಡ್ಕರ್ ಅಧ್ಯಯನ ಕೇಂದ್ರವು ಡಾ.ಬಿ.ಆರ್.ಅಂಬೇಡ್ಕರ್ ತರಬೇತಿ, ಸಂಶೋಧನೆ ಹಾಗೂ ವಿಸ್ತರಣಾ ಕೇಂದ್ರ, ಬೆಂಗಳೂರು ಮತ್ತು ರಾಜ್ಯಶಾಸ್ತ್ರ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಿರಾ. ಇವರ ಸಹಯೋಗದೊಂದಿಗೆ ದಿನಾಂಕ: 11.03.2026 ರಂದು **"ಬಾಬಾ ಸಾಹೇಬ್ ಡಾ.ಬಿ.ಆರ್. ಅಂಬೇಡ್ಕರ್ ವಿಚಾರಗಳು ಮತ್ತು ಭಾರತದ ಸಂವಿಧಾನ"** ಎಂಬ ವಿಷಯ ಕುರಿತು ಒಂದು ದಿನದ ವಿಚಾರ ಸಂಕಿರಣವನ್ನು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಿರಾ ಇಲ್ಲಿ ಆಯೋಜಿಸುತ್ತಿದ್ದು, ಸದರಿ ಕಾರ್ಯಕ್ರಮಕ್ಕೆ ಅಗತ್ಯವಿರುವ **"ಉಪನ್ಯಾಸಕರಿಗೆ ಊಟ ಮತ್ತು ವಿದ್ಯಾರ್ಥಿಗಳಿಗೆ ಲಘು ಉಪಹಾರ"** ಸರಬರಾಜು ಮಾಡಲು ಆಸಕ್ತ ಸಂಸ್ಥೆಗಳಿಂದ ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ದರಪಟ್ಟಿಗಳನ್ನು ಆಹ್ವಾನಿಸಲಾಗಿದೆ.

| ಕ್ರ.ಸಂ. | ವಿವರ | ಸರಬರಾಜಿನ ಅಂದಾಜು ಪ್ರಮಾಣ | ನಮೂದಿಸುವ ಮೊತ್ತ ರೂಗಳಲ್ಲಿ ಪ್ರತಿ ಪ್ಲೇಟಿಗೆ (ಎಲ್ಲಾ ತೆರಿಗೆ/ಸೇವೆ ಸೇರಿದಂತೆ) |
|---|---|---|---|
| 1. | <u>ಉಪನ್ಯಾಸಕರಿಗೆ ಊಟ</u><br>ಹೋಳಿಗೆ, ತುಪ್ಪ, ಪೂರಿ ಸಾಗು, ಕೋಸಂಬರಿ, ಸ್ವೀಟ್, ಅನ್ನ ರಸಂ, ಮೊಸರು ಮತ್ತು ಬಾಳೆಹಣ್ಣು | 60 | |
| 2. | <u>ವಿದ್ಯಾರ್ಥಿಗಳಿಗೆ ಲಘು ಉಪಹಾರ</u><br>ಪಲಾವ್, ಮೊಸರು ಬಜ್ಜಿ, ಮಸಾಲ ವಡೆ ಮತ್ತು ಸ್ವೀಟ್ | 300 | |

**<u>ಷರತ್ತು ಮತ್ತು ನಿಬಂಧನೆಗಳು:</u>**

1. ಮುಚ್ಚಿದ ಲಕೋಟೆಯ ಮೇಲೆ **"ಉಪನ್ಯಾಸಕರಿಗೆ ಊಟ ಮತ್ತು ವಿದ್ಯಾರ್ಥಿಗಳಿಗೆ ಲಘು ಉಪಹಾರ"** ಕ್ಕೆ ದರಪಟ್ಟಿ ಎಂದು ಸ್ಪಷ್ಟವಾಗಿ ನಮೂದಿಸಬೇಕು.
2. ದರಪಟ್ಟಿಯನ್ನು ಸಲ್ಲಿಸಲು ಕೊನೆಯ **ದಿನಾಂಕ: 09.03.2026 ಮಧ್ಯಾಹ್ನ 12.00 ಗಂಟೆ.**
3. ದರಪಟ್ಟಿಯನ್ನು **ದಿನಾಂಕ: 09.03.2026 ರಂದು ಸಮಯ 12.30 ಕ್ಕೆ** ತೆರೆಯಲಾಗುವುದು.

ಮು.ತಿ.ನೋ.,,

4. ದರಪಟ್ಟಿಗಳನ್ನು **ಪ್ರೊ. ಕೇಶವ, ನಿರ್ದೇಶಕರು, ಡಾ.ಬಿ.ಆರ್.ಅಂಬೇಡ್ಕರ್ ಅಧ್ಯಯನ ಕೇಂದ್ರ, ತುಮಕೂರು ವಿಶ್ವವಿದ್ಯಾನಿಲಯ,** ಬಿ.ಹೆಚ್. ರಸ್ತೆ, ತುಮಕೂರು-572 103 ಇವರಿಗೆ ಮುದ್ದಾಂ ಅಥವಾ ಅಂಚೆಯ ಮೂಲಕ ತಲುಪಿಸಬಹುದು. ಅಂಚೆಯ ವಿಳಂಬಕ್ಕೆ ಅಥವಾ ಅಂಚೆಯು ತಲುಪದಿದ್ದಲ್ಲಿ ವಿಶ್ವವಿದ್ಯಾನಿಯವು ಜವಬ್ದಾರಿಯಾಗುವುದಿಲ್ಲ.
5. ದರಪಟ್ಟಿಯ ಅವಧಿಯು ದರಪಟ್ಟಿಯನ್ನು ತೆರೆದ ದಿನಾಂಕದಿಂದ ಒಂದು ವಾರದವರೆಗೆ ಚಾಲ್ತಿಯಲ್ಲಿರಬೇಕು.
6. ದರಪಟ್ಟಿ ಸಲ್ಲಿಸುವ ಸಂಸ್ಥೆಯವರು ತಮ್ಮ ಸಂಸ್ಥೆಯ GSTIN No. ಮತ್ತು PAN No. ದಾಖಲೆಗಳನ್ನು ದರಪಟ್ಟಿಯ ಜೊತೆಗೆ ಲಗತ್ತಿಸಬೇಕು.
7. ಸರಬರಾಜು ಮಾಡಿದ 30 ದಿನಗಳೊಳಗೆ ಹುಂಡಿಯನ್ನು ವಿಶ್ವವಿದ್ಯಾನಿಲಯದ ನಿಯಮಾನುಸಾರ ಪಾವತಿಸಲು ಕ್ರಮ ಕೈಗೊಳ್ಳಲಾಗುವುದು.
8. ದರಪಟ್ಟಿಗಳನ್ನು ಯಾವುದೇ ಕಾರಣ ನೀಡದೆ ಅಂಗೀಕರಿಸುವ ಅಥವಾ ತಿರಸ್ಕರಿಸುವ ಪೂರ್ಣ ಹಕ್ಕನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿದೆ.
9. ಷರತ್ತುಬದ್ಧ ದರಪಟ್ಟಿಗಳನ್ನು ಪರಿಗಣಿಸಲಾಗುವುದಿಲ್ಲ.
10. ಪ್ರತಿ ಸಂಸ್ಥೆಯವರು ಏಕೈಕ ದರಪಟ್ಟಿಯನ್ನು ಮಾತ್ರ ಸಲ್ಲಿಸತಕ್ಕದ್ದು.
11. ಹೆಚ್ಚಿನ ವಿವರಗಳು ಅಥವಾ ಮಾಹಿತಿಯು ಅಗತ್ಯವಿದ್ದಲ್ಲಿ **ಪ್ರೊ. ಕೇಶವ, ನಿರ್ದೇಶಕರು, ಡಾ.ಬಿ.ಆರ್.ಅಂಬೇಡ್ಕರ್ ಅಧ್ಯಯನ ಕೇಂದ್ರ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು** ಇವರನ್ನು ಸಂಪರ್ಕಿಸುವುದು. ಇವರ ದೂರವಾಣಿ **ಸಂಖ್ಯೆ:, 9880836863**

Keshava

**ನಿರ್ದೇಶಕರು,**

ನಿರ್ದೇಶಕರು
ಡಾ|| ಬಿ.ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರ
ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು

**ಪ್ರತಿಗಳು:**

1. ಸಿಸ್ಟಮ್ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. (ಇಂದೇ ವೆಬ್‌ಸೈಟ್‌ನಲ್ಲಿ ಪ್ರಕಟಿಸತಕ್ಕದ್ದು)
2. ಕಚೇರಿ ಪ್ರತಿ.